OS No. 91/2023

PW-1

**(ಇಂದು ದಿಃ 06-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- 4 ಮತ್ತು 5ನೇ ಪ್ರತಿವಾದಿಯರ ಪರ ಶ್ರೀ.TVP ವಕೀಲರಿಂದಃ-**

ನಾನು ಅ-ವಿದ್ಯಾವಂತ. ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ದಾವಾ ಆಸ್ತಿಯ ಎಲ್ಲಾ ವರ್ಷಗಳ ಪಹಣಿಗಳನ್ನು ನೋಡಿದ್ದೇನೆ. ಪಹಣಿಗಳಲ್ಲಿ ಮಾಲೀಕ ಮತ್ತು ಕಬ್ಜಾದಾರರ ಕಾಲಂನಲ್ಲಿ ನನ್ನ ಮುತ್ಯಾ ಈರಪ್ಪ ತಂದೆ ಸಿದ್ದಪ್ಪ ರವರ ಹೆಸರು ಇದೆ. 1955 ರಿಂದ 2014 ರಲ್ಲಿ ಮುಟೇಷನ್ ಆಗುವವರೆಗೆ ದಾವಾ ಆಸ್ತಿಯ ಪಹಣಿಗಳಲ್ಲಿ ತಿಪ್ಪಣ್ಣ ತಂದೆ ಈರಪ್ಪ ಹುಂಡೇಕರ್ ಎಂದು ಇದೆ ಎಂದರೆ ಸರಿ. ಈ ಪಹಣಿಗಳಲ್ಲಿ ಈರಪ್ಪ @ ವಿರಭದ್ರಪ್ಪ ತಂದೆ ಸಂಗಪ್ಪ ತಂದೆ ಸಿದ್ದಪ್ಪ ಎಂದು ಇಲ್ಲ ಎಂದರೆ ಸರಿ. ಈರಪ್ಪನಿಗೆ ವಿರಭದ್ರಪ್ಪ ಎಂದು ಮತ್ತು ಸಂಗಪ್ಪನಿಗೆ ಸಿದ್ದಪ್ಪ ಎಂದು ಕೂಡ ಕರೆಯುತ್ತಿದ್ದರು ಎಂದು ತೋರಿಸಲು ನನ್ನ ಬಳಿ ದಾಖಲಾತಿ ಇಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರದು ಆ ಬಗ್ಗೆ ಚುನಾವಣೆ ಗುರುತಿನ ಚೀಟಿ ಇದೆ ಎಂದು ಹೇಳುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಈರಪ್ಪನಿಗೆ ವಿರಭದ್ರಪ್ಪ ಎಂದು ಮತ್ತು ಸಂಗಪ್ಪನಿಗೆ ಸಿದ್ದಪ್ಪ ಎಂದು ಕೂಡ ಕರೆಯುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಂದ್ರಕಾಂತ ನ ಹೆಂಡತಿ ಮಹಾದೇವಿ ಅಂದರೆ 3 ನೇ ಪ್ರತಿವಾದಿ ಹೈದ್ರಾಬಾದ್ ನಲ್ಲಿ ವಾಸವಿರುತ್ತಾಳೆ ಎಂದರೆ ಸರಿ. ಅವಳು ಮೇಲಿಂದ ಮೇಲೆ ಅಡಕಿಗೆ ಬಂದು ಹೋಗುತ್ತಾಳೆ ಎಂದರೆ ಸರಿಯಲ್ಲ, ನಾಗಣ್ಣ ನ ಹೆಂಡತಿ ಮಹಾದೇವಿ ಅಂದರೆ 5ನೇ ಪ್ರತಿವಾದಿ ಕಲಬುರಗಿಯಲ್ಲ ವಾಸವಿದ್ದಾಳೆ ಎಂದರೆ ನಾನು ಅವಳನ್ನು ನೋಡಿಲ್ಲ, ಅದೇ ರೀತಿ 4 ನೇ ಪ್ರತಿವಾದಿ ಕಲಬುರಗಿಯಲ್ಲಿ ವಾಸವಿದ್ದಾರೆ ಎಂದರೆ ನಾನು ಅವರನ್ನು ನೋಡಿಲ್ಲ, 3 ರಿಂದ 5 ನೇ ಪ್ರತಿವಾದಿಯರು ಈರಪ್ಪ ತಂದೆ ಸಂಗಪ್ಪ ನ ವಾರಸುದಾರರು ಎಂದರೆ ಸರಿಯಲ್ಲ, ದಾವಾ

ಸರ್ವೆ ನಂಬರ ನನಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. 3 ರಿಂದ 5 ನೇ ಪ್ರತಿವಾದಿಯರು ಈರಪ್ಪನ ವಾರಸುದಾರರು ಎಂದು ನನಗೆ ಗೊತ್ತಿದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ರಿಂದ 5 ನೇ ಪ್ರತಿವಾದಿಯರು ಗ್ರಾಮದಲ್ಲಿ ವಾಸ ಇಲ್ಲದೆ ಇರುವುದರ ದುರುಪಯೋಗ ಪಡಿಸಿಕೊಂಡು ನಾನು ದಾವಾ ಸ್ವತ್ತಿನ ಪಹಣಿ ನನ್ನ ಹೆಸರಿಗೆ ಮಾಡಿಕೊಳ್ಳಲು ಪ್ರಯತ್ನ ಪಟ್ಟೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**